3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿ ಇತ್ತು. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ಇನಿಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯೂ ಇತರ ಖರ್ಚುಗಳು ಸೇರಿ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾ ಕ್ತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಷರ್ಯರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯುವಾದ್ದಾಗಿರುವದಿಲ್ಲನ್ನು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾ ಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾ ಜ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ಲುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗ ಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ತೀರ್ಮಾನಕ್ಕೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ತಾಲ್ಲೂಕು	ಹೋಬ್ಳಿ	ಗ್ರಾಮ	ಜೋಡಿದಾರರ ಹೆಸರು	ಅಂದಾಜಾ ಬೀಜವರಿ	ಅಂದಾಜಾ ಹುಟ್ಟುವ ನಕ್ಕಿ ಯ ಬೀರೀಜ	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯಿಸ್ತಿ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಸ್ಥಳ
ಅಲೂರು ಸಬ್ ತಾಲ್ಲೂಕ	ನಾಲ್ಕೈ	ಜೋಡಿ ಬ್ಯಾಲದಹಳ್ಳಿ	ನರಸಿಂಹಪ್ಪು ಸೆಟ್ಟಿ ಮಗ್ಗೈ 20 ಜನ	ಪರಂಪೋಕು ಎ. ಗು. 196 15 ಖುಷ್ಕಿ ... 79 27 ತರಿ ... 130 0 ಬಾಗಾಯತು 1 18 ಜುಮ್ಲಾ .. 407 20	ರೂ. ಆ. 3 0 11 8 486 0 4 0 504 8	ರೂ. 334	ರೂ. ಆ. ಪೈ. 1,070 8 10 1905-06ನೆ ಸಾಲ್ ಆಖೈರ್ ವರೆಗೆ.	1907ನೆ ಇಸವಿ ಏಪ್ರಿಲ್ 8ನೆ ತಾ|| ಸೋಮವಾರ ದಿವಸ ಬೆಳಿಗ್ಗೆ 11 ಘಂಟೆ ವರೆಗೆ ಅಲೂರು ಸಬ್ ತಾಲ್ಲೂಕ್ ಕಛೇರಿ ಯಲ್ಲಿ ಸದರಿ ಜಿಲ್ಲಾ ಕಲೆಕ್ಟರವರು ಬಹಿರಂಗವಾಗಿ ಹರಾಜು ಮಾಡಿ ಜಪ್ತಿ ಮಾಡಿಸುತ್ತಾರೆ.

ಪರಾ—ಜೋಡೀದಾರರುಗಳಿಂದಲಾಗಲಿ ಯಾ ಖಾಯಂಗುತ್ತಾದಾರರುಗಳಿಂದಲಾಗಲಿ ಖಾಯ್ಕೆತೆ ಮೂಲಕ ಇವರುಗಳಿಗೆ ಂಪೆಯಿದ್ದವರಿಂದಲಾಗಲಿ ಉಂಟು ಮಾಡಲ್ಪಟ್ಟ ತಪಾಂ ಹಿಡುವಳಿಗಳಿಗಾಗಲಿ ದೇಣಿಗಳಿಗೆ ಆಗಲಿ ಮತ್ತು ಹಕ್ಕುಗಳಿಗೆ ಆಗಲಿ ಥವಾ ಮತ್ಯಾವ ಸಂಬಂಧಗಳಿಗೆ ಆಗಲಿ ಸದರಿ ಹರಾಜು ಬಳಪಟ್ಟು ಇರುವದಿಲ್ಲ.

ಟಿ. ಧರ್ಮರಾಜು ಜೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್.

ತಾರೀಖು 31ನೆ ಜನವರಿ 1907.

ತರೀಕೆರೆ ತಾಲ್ಲೂಕು ಕೆಳಗಿನ ಶಿವಬ್ಬೆಲ್ ಎಸ್ಟೇಟು ಮಿ" ಡೇವಿಡ್ ಹೆನ್ರಿ ಕೋರ್ಪಲೆನ್ ಸಾಹೇಬರವರಿಂದ ತಿಗಡ ಗ್ರಾಮಕ್ಕೆ ಆಗಬೇಕಾದ ಕಂದಾಯದ ಬಾಕೀಗಾಗಿ ಇವರ ಸ್ಥಿರಸ್ವತ್ತನ್ನು ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ನಂದಿಬಟ್ಟು ಗ್ರಾಮ ದಲ್ಲಿ ಸ್ಯ 1907ನೆ ಇಸವಿ ಮಾರ್ಚಿ ತಾರೀಖು 1ನೆ ಸೋಮವಾರದ ದಿವಸ ತಾಲ್ಲೂಕು ಅವುಲ್‌ದಾರ್‌ರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚಿನ ತಪಸೀಲುಗಳಿಗೆ 1907ನೆ ಇಸವಿ ಫೆಬ್ರವರಿ 7ನೆ ತಾರೀಖು 6ನೆ ಮಕ್ರೂಂ ಮೈಸೂರು ಗೆಜೆಟ್ಟಿನ IIನೆ ಭಾಗದ 12ನೆ ನಂಬರ್ ಪೇಜ್ ನೋಡಬೇಕು.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡೆಪ್ಯುಟಿ ಕಮಿಷನರ್.